ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

ಸಂಖ್ಯೆ:92/ನೇಮಕಾತಿ-2/2020-21

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ರವರ ಕಛೇರಿ
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:22.06.2021.

ವಿಷಯ: ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) (ಪುರುಷ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ:92/ನೇಮಕಾತಿ-2/2020-21, ದಿನಾಂಕ:07.05.2020.
2) ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಸಂಖ್ಯೆ:92/ನೇಮಕಾತಿ-2/2020-21, ದಿನಾಂಕ:01.03.2021.
3) ಭಾಗಶಃ ಅಂತಿಮ ಆಯ್ಕೆ ಪಟ್ಟಿ ದಿನಾಂಕ:19.04.2021.
4) ಐಜಿಪಿ, ಪೂರ್ವ ವಲಯ, ದಾವಣಗೆರೆ ರವರ ಪತ್ರ ಸಂಖ್ಯೆ:70/ಸಿಬ್ಬಂದಿ-1/ನೇಮಕಾತಿ/ಪೂವ/15-16 ದಿನಾಂಕ: 21.06.2021.

## ಐಜಿಪಿ, ಪೂರ್ವ ವಲಯ, ದಾವಣಗೆರೆ ಘಟಕಕ್ಕೆ ಸಂಬಂಧಿಸಿದ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) ಹುದ್ದೆಗಳ ಭಾಗಶಃ(5) ಅಂತಿಮ ಆಯ್ಕೆಪಟ್ಟಿ

1. ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) (ಪುರುಷ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿಯನ್ನು ಉಲ್ಲೇಖಿತ-1ರ ಅಧಿಸೂಚನೆಯನ್ವಯ ಕೈಗೊಳ್ಳಲಾಗಿರುತ್ತದೆ. ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳು, 2009 ರಲ್ಲಿನ ನಿಯಮಗಳಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಲ್ಲೇಖಿತ-2 ರನ್ವಯ ಪ್ರಕಟಿಸಲಾಗಿರುತ್ತದೆ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಗುಣ ಮತ್ತು ನಡತೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳುವಂತೆ **ಐಜಿಪಿ, ಪೂರ್ವ ವಲಯ, ದಾವಣಗೆರೆ** ರವರಿಗೆ ನಿರ್ದೇಶಿಸಿದ ಹಿನ್ನೆಲೆಯಲ್ಲಿ ಸದರಿಯವರು ಅಭ್ಯರ್ಥಿಗಳ ದಾಖಲೆಗಳ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಿ, ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನುಸಾರ ಒಬ್ಬ ಅಭ್ಯರ್ಥಿಯ (ನೋಂದಣಿ ಸಂಖ್ಯೆ:3501059) ಇಲಾಖಾ ವಿಚಾರಣೆಯು ಬಾಕಿ ಇರುವುದಾಗಿ ತಿಳಿಸಲಾದ ಹಿನ್ನೆಲೆಯಲ್ಲಿ ಸದರಿ ಅಭ್ಯರ್ಥಿಯ ಫಲಿತಾಂಶವನ್ನು ಬಾಕಿ ಇರಿಸಿ ಉಲ್ಲೇಖಿತ-3 ರನ್ವಯ ಭಾಹಶಃ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

2. **ಐಜಿಪಿ, ಪೂರ್ವ ವಲಯ,** ದಾವಣಗೆರೆ ರವರು ಉಲ್ಲೇಖಿತ-4 ರನ್ವಯ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀ ಮಂಜುನಾಥ ಬಿದ್ರಿಕೊಪ್ಪ ರವರು ಅಂತಿಮ ಆಯ್ಕೆಗೆ ಅರ್ಹರಿರುವುದಾಗಿ ತಿಳಿಸಿರುತ್ತಾರೆ. ಸದರಿ ವರದಿಯನುಸಾರ ಒಬ್ಬ ಅಭ್ಯರ್ಥಿಯು ಅಂತಿಮ ಆಯ್ಕೆಗೆ ಅರ್ಹನಾಗಿರುವುದರಿಂದ ವೃಂದ ಮತ್ತು ನೇಮಕಾತಿ ನಿಯಮನುಸಾರ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) (ಪುರುಷ) (ಸೇವಾನಿರತ) ಹುದ್ದೆಗೆ ಮೆರಿಟ್ ಹಾಗೂ ಮೀಸಲಾತಿಯನುಸಾರ ಅರ್ಹ ಅಭ್ಯರ್ಥಿಯ **ಐಜಿಪಿ, ಪೂರ್ವ ವಲಯ, ದಾವಣಗೆರೆ** ಘಟಕದ ಅಂತಿಮ ಆಯ್ಕೆಪಟ್ಟಿಯನ್ನು ತಯಾರಿಸಿ, ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ.

1) ಈ ಅಂತಿಮ ನೇಮಕಾತಿಯು ಸೇವಾನಿರತ ಅಭ್ಯರ್ಥಿಗಳು ಮತ್ತು ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳ ವಾರ್ಷಿಕಕಾರ್ಯ ನಿರ್ವಹಣಾ ವರದಿ ಮತ್ತು ಇಲಾಖಾ ವಿಚಾರಣೆಯ ಪರಿಶೀಲನೆಯ ಷರತ್ತುಗಳಿಗೊಳಪಟ್ಟಿರುತ್ತದೆ.

2) ಈ ಆಯ್ಕೆಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ / ಮಾನ್ಯ ಉಚ್ಚ ನ್ಯಾಯಾಲಯ / ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನಗಳಿಗೆ ಒಳಪಟ್ಟಿರುತ್ತದೆ.

| FINAL SELECT LIST FOR THE POST OF ARMED RESERVE SUB-INSPECTOR (CAR/DAR) (MEN) (INSERVICE) (MERITWISE) | | | | | | | |
|---|---|---|---|---|---|---|---|
| SL. NO. | APPN. NO. | ROLL NO. | NAME | MARKS SECURED | | TOTAL | SELECTED CATEGORY |
| | | | | P1 | P2 | | |
| 1 | 2531209 | 3501089 | MANJUNATH BIDRIKOPPA | 32.5 | 112.5 | 145 | GM_OTH |

ಟಿಪ್ಪಣಿ : ಈ ಅಂತಿಮ ಆಯ್ಕೆ ಪಟ್ಟಿಯಲ್ಲಿನ ಆಯ್ಕೆಯ ಪ್ರವರ್ಗ ಮತ್ತು ಘಟಕದ ಹಂಚಿಕೆಯು, ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಕೆಲವು ಅಭ್ಯರ್ಥಿಗಳ ಅನರ್ಹತೆಯ ಕಾರಣಗಳಿಂದ ಕ್ರೋಢೀಕೃತ ಆಯ್ಕೆ ಪಟ್ಟಿಯು ಪರಿಷ್ಕರಣೆಯಾದಲ್ಲಿ ಸದರಿ ಆಯ್ಕೆ ಪಟ್ಟಿಯಲ್ಲಿ ಬದಲಾವಣೆಯಾಗುವ ಪ್ರವರ್ಗಗಳನುಸಾರ ಘಟಕಗಳ ಬದಲಾವಣೆಯ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ ಮತ್ತು ಅಧ್ಯಕ್ಷರು,
ಆರ್‌ಎಸ್‌ಐ (ಸಿಎಆರ್ / ಡಿಎಆರ್) ನೇಮಕಾತಿ ಸಮಿತಿ,
ಕಾರ್ಲಟನ್ ಭವನ, ಅರಮನೆ ರಸ್ತೆ,
ಬೆಂಗಳೂರು.

ಪ್ರತಿಯನ್ನು:
1] ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲಿಸ್, ಪೂರ್ವ ವಲಯ, ದಾವಣಗೆರೆ.
2] ಕಛೇರಿ ಕಡತ ಮತ್ತು ಸೂಚನಾ ಫಲಕ.

ಪ್ರತಿಯನ್ನು ಅಭಿನಂದನೆಗಳೊಂದಿಗೆ:-
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.